ಪ್ರತಿ ಹಂತದಲ್ಲೂ ಕೆಲಸ ಕಾರ್ಯಗಳನ್ನು ತಿಳಿದು ದೂರವಾಣಿಯಲ್ಲಿ ಮೆಚ್ಚುಗೆ ಮಾತುಗಳನ್ನು ಹೇಳುತ್ತಿದ್ದರು. ಕೆಲಸಗಳಲ್ಲಿ ನ್ಯೂನತೆ ಕಂಡಾಗ ಅಷ್ಟೇ ತೀಕ್ಷ್ಣವಾಗಿ ಹೇಳಿ ಸರಿಪಡಿಸಿಕೊಳ್ಳಲು ಹೇಳುತ್ತಿದ್ದರು. ಜಸ್ಟೀಸ್ ಎನ್.ಡಿ. ವೆಂಕಟೇಶ್ ಅವರು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾಗ ಸಹ ಬಹಳಷ್ಟು ವಿಚಾರಗಳಲ್ಲಿ ಕಮಲಾ ಅವರ ಸಲಹೆ ಪಡೆಯುತ್ತಿದ್ದರು. ಕುವೆಂಪು ಶತಮಾನೋತ್ಸವ ಭವನ ಪೂರ್ಣಗೊಂಡ ಸಂದರ್ಭದ ಒಂದು ಮೀಟಿಂಗ್‌ನಲ್ಲಿಯೇ ಅವರು ಅಲ್ಲಿಯ ಸಭಾಂಗಣಕ್ಕೆ 'ಹೇಮಾಂಗಣ' ಎಂಬ ಅರ್ಥಪೂರ್ಣ ಹೆಸರನ್ನು ಸೂಚಿಸಿದ್ದರು.

ವರ್ಷದಲ್ಲಿ ಒಂದೆರಡು ಸಾರಿಯಾದರೂ ಕುಪ್ಪಳಿಗೆ ಬಂದು, ಎಲ್ಲವನ್ನು ನೋಡಿ ಪ್ರೋತ್ಸಾಹದ ಮಾತುಗಳನ್ನು ಹೇಳಿ, ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಎರಡು ಮೂರು ದಿನದ ಸಾಹಿತ್ಯ ಶಿಬಿರದಲ್ಲಿ ಪ್ರತಿಯೊಬ್ಬರ ಮಾತುಗಳನ್ನು ಮುಂದಿನ ಸಾಲಿನಲ್ಲಿ ದಂಪತಿ ಕೂತು ಕೇಳಿಸಿಕೊಳ್ಳುತ್ತಿದ್ದರು. ನಾನು ಗಮನಿಸಿದ ಹಾಗೆ, ಅವರಿಬ್ಬರಲ್ಲಿ ಬೇರೆಯವರ ಮಾತುಗಳನ್ನು ಸಾವಧಾನದಿಂದ ಕೇಳಿಸಿಕೊಳ್ಳುವ ವಿಶೇಷವಾದ ಗುಣ ಇತ್ತು. ಯಾವುದೇ ನಿರ್ಧಾರಗಳಿಗೂ ಆತುರ ಪಡುತ್ತಿರಲಿಲ್ಲ. ಹಂಪನಾ ಅವರು ಕೆಲವೊಮ್ಮೆ ತುಸು ಆತುರದಲ್ಲಿ ನಿರ್ಧಾರ ಹೇಳಿದರೂ, ಕಮಲಾ ಅವರು 'ಯೋಚಿಸಿ ಹೇಳೋಣ' ಎನ್ನುತ್ತಿದ್ದರು.

ಕುವೆಂಪು ವಿಚಾರದಲ್ಲಿ ಸರ್ಕಾರ ಸರಿಯಾದ ನಿಲುವನ್ನು ತೆಗೆದುಕೊಳ್ಳಲಿಲ್ಲ ಎಂದು ಹಂಪನಾ ವಿರೋಧಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆಗ ಪ್ರತಿಷ್ಠಾನದ ಸದಸ್ಯರು, ಅವರು ರಾಜೀನಾಮೆ ವಾಪಾಸ್ ಪಡೆಯಬೇಕು ಎಂದು ಕಮಲಾ ಅವರ ಮೇಲೆ ಒತ್ತಡ ಹೇರಿದರು. 'ಅವರು ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡಿದ್ದಾರೆ. ಪುನಃ ಹಿಂದೆ ಬರುವ ಪ್ರಶ್ನೆಯೇ ಇಲ್ಲ. ನಾನು ಕೂಡ ಹೊರ ಹೋಗುತ್ತೇನೆ' ಎಂದು ಕಮಲಾ ಅವರು ಹೇಳಿದಾಗ, ನಾವುಗಳೆಲ್ಲ 'ಸದ್ಯ, ಆ ನಿರ್ಧಾರ ಬೇಡ' ಎಂದು ಒತ್ತಾಯ ಮಾಡಿ ಉಳಿಸಿಕೊಂಡಿದ್ದೆವು. ಹಂಪನಾ ರಾಜೀನಾಮೆ ವಾಪಾಸ್ ಪಡೆದರೆ ನಮ್ಮಿಂದ ಸಮಾಜಕ್ಕೆ ಹೋಗುವ ಸಂದೇಶ ಏನು ಎನ್ನುವುದನ್ನು ಕಮಲಾ ಅವರು ನನಗೆ ವಿವರಿಸಿ ಹೇಳಿದ್ದುದು ಈಗಲೂ ನೆನಪಿನಲ್ಲಿದೆ.

ಸುಮಾರು 14 ವರ್ಷ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿ ಹಂಪನಾ ಕಾರ್ಯ ನಿರ್ವಹಿಸಿದ್ದರು. ಅವರ ಪೂರ್ಣ ಅವಧಿಗೂ ನಾನೇ ಸಮ ಕಾರ್ಯದರ್ಶಿ. ಪದೇ ಪದೇ ನಾನು ಹಂಪನಾ, ಕಮಲಾ ಅವರನ್ನು ಭೇಟಿ ಆಗಬೇಕಾಗುತ್ತಿತ್ತು. ನನಗೆ ಅವರ ಮನೆ ಬಾಗಿಲು ಸದಾ ತೆರೆದಿರುತ್ತಿತ್ತು. 'ಮನೆಗೆ ಬರುತ್ತಿದ್ದೇನೆ' ಎಂದು ಹಂಪನಾ ಅವರಿಗೆ ಫೋನ್ ಮಾಡಿದಾಗ, ನಮ್ಮಿಬ್ಬರ ಮಾತನ್ನು ಕೇಳಿಸಿಕೊಂಡು ಕಮಲಾ ಅವರು 'ಪ್ರಕಾಶ್‌ನ ನಾಷ್ಟಕ್ಕೆ (ತಿಂಡಿಗೆ) ಬರಲು ಹೇಳಿ. ಮಸಾಲೆ ದೋಸೆ ಮಾಡಿದ್ದೇನೆ' ಎಂದು ಜೋರಾಗಿ ಹೇಳುವುದು ನನಗೆ ಕೇಳಿಸುತ್ತಿತ್ತು. ಹಂಪನಾ 'ಬಂದು ಬಿಡಪ್ಪ, ಇಬ್ಬರೂ ಬಿಸಿ ಬಿಸಿ ದೋಸೆ ತಿನ್ನೋಣ. ಕಾಯುತ್ತೇನೆ' ಎನ್ನುತ್ತಿದ್ದರು. ಹಾಗೆ ಹೋದಾಗ ಕಮಲಾ ಅವರು ದೋಸೆ-ಬೆಣ್ಣೆ ಕೊಡುತ್ತಿದ್ದರು. ಹಂಪನಾ ಅವರು 'ದೋಸೆಗೆ ಸಮ ಪ್ರಮಾಣದ ಬೆಣ್ಣೆಯೂ ಬೇಕಪ್ಪ' ಅಂತ ಹೇಳುತ್ತಿದ್ದರು. ತಿಂಡಿ ಸಮಯವಾದರೆ ತಿಂಡಿ, ಊಟದ ಸಮಯವಾದರೆ ಊಟ ಕೊಡದೇ ಕಮಲಾ ಅವರು ಕಳಿಸುತ್ತಿರಲಿಲ್ಲ.

ಅಂದಿನ ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರು ಪ್ರತಿಷ್ಠಾನದ ಮೊದಲನೇ ಸಭೆಯನ್ನು ಹಂಪನಾ ಅವರ ಮನೆಯಲ್ಲೇ ಮಾಡಿದ್ದರು. ಆ ದಿನ ಎಲ್ಲ ಸದಸ್ಯರಿಗೂ ಕಮಲಾ ಅವರೇ ಅಡುಗೆ ಮಾಡಿ ಬಡಿಸಿದ್ದನ್ನು ಬಂಗಾರಪ್ಪನವರೇ ಒಂದು ಭಾಷಣದಲ್ಲಿ ಹೇಳಿದ್ದರು. ಒಂದು ದಿನ ಜಿಲೇಬಿ ತಟ್ಟೆ ತಂದು ನನ್ನ, ಹಂಪನಾ ಮುಂದೆ ಇಟ್ಟರು. ನಾನು 'ಇಷ್ಟೊಂದು?' ಎಂದೆ, 'ಬಿಸಿ ಇದೆ ತೆಗೆದುಕೊಳ್ಳಿ' ಎಂದರು. ಹಂಪನಾ 'ಜಿಲೇಬಿ ಒಂದೆರಡು ತಿನ್ನಬಾರದಪ್ಪ' ಅಂತ ಪರಮಹಂಸರು ಜಿಲೇಬಿ ತಿನ್ನುವ ಕಥೆ ಹೇಳಿದ್ದರು. ಅವರೂನು ಒಂದರ ನಂತರ ಒಂದರಂತೆ ನಾಲ್ಕು ಜಿಲೇಬಿ ಇಳಿಸಿದರು. ನಾನೂನು ಅವರ ಸಂಖ್ಯೆಯ ಹಿಂದೆ ಹೋಗಿ ನಾಲ್ಕು ಇಳಿಸಿದೆ. 'ನೀವು ನನಗಿಂತ ಚಿಕ್ಕವರು' ಅಂತ ಅವರೇ ನೆನಪಿಸಿದ ಮೇಲೆ ಮತ್ತೆರಡು ತಿಂದೆ. ಹಂಪನಾ ನನ್ನ ಜಿಲೇಬಿ ಜುಗಲಬಂದಿ ಚೆನ್ನಾಗಿಯೇ ಇತ್ತು. ನಾನು ಮನೆಗೆ ಬಂದು ಹೇಳಿದಾಗ, ಮನೆಯವರು – 'ಸದ್ಯ ತಟ್ಟೆಯನ್ನು ಬಿಟ್ಟಿದ್ದಾರಲ್ಲ ಎಂದು ಕಮಲಾ ಅವರು ಅಂದುಕೊಂಡಿರುತ್ತಾರೆ' ಎಂದಿದ್ದರು.